**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ. 689/2018**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿನಾಂಕಃ 28-06-2023** **ಡಿ ಡಬ್ಲ್ಯೂ 1**

| | |
|---|---|
| ಹೆಸರು | ಸುಶಾಂತ್ ಬಿ ಚವಾನ್ |
| ತಂದೆ ಹೆಸರು | ಬಸವಂತ್ ಚೌವಾನ್ |
| ವಯಸ್ಸು | 42 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸ ಸ್ಥಳ | ಬೆಳಗಾಂ |

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಕೆ ಎಂ ವಕೀಲರಿಂದಃ**

ಪಿರ್ಯಾದಿ ನನಗೆ ದತ್ತಾತ್ರೇಯ ಮಹರ್ ವಾಡೆ ಅವರ ಮೂಲಕ ಪರಿಚಯ. ಪಿರ್ಯಾದಿ ಸದರಿ ದತ್ತಾತ್ರೇಯ ಮಹರ್ ವಾಡೆ ಅವರ ತಂಗಿ. ಸನ್ 2015 ರಲ್ಲಿ ಪಿರ್ಯಾದಿ ನನ್ನಿಂದ ಒಂದು ಖಾಲಿ ನಿವೇಶನವನ್ನು 5,50,000/- ರೂಗಳಿಗೆ ಖರೀದಿ ಮಾಡಿರುತ್ತಾರೆ. ಸದರಿ ನಿವೇಶನವನ್ನು 200/- ರೂಗಳ ಬಾಂಡ್ ನೊಂದಿಗೆ ನೋಟರಿ ಮಾಡಿಸಿ ಕೊಟ್ಟಿದ್ದೇನೆ. ಸದರಿ ಸಂದರ್ಭದಲ್ಲಿ ಪಿರ್ಯಾದಿ ನನಗೆ 5,50,000/- ರೂಗಳನ್ನು ನಗದು ರೂಪದಲ್ಲಿ ನೀಡಿದ್ದರು. 1 ವರ್ಷದ ನಂತರ ನಿವೇಶನ ಬೇಡವೆಂದು ನನಗೆ ಹೇಳಿದರು. ಆಗ ತಾವು ನೀಡಿದ ಹಣವನ್ನು ಮರಳಿ ಕೇಳಿದರು. ಆ ಸಂದರ್ಭದಲಿ ಮಾತುಕತೆ ಅನುಸಾರ ನಾನು ಅವರಿಗೆ 6 ಲಕ್ಷ ರೂ ಕೊಡಬೇಕು ಎಂದು ಒಪ್ಪಂದ ಆಗಿತ್ತು. ಸದರಿ ಮಾತುಕತೆ ಬೆಳಗಾಂ ದಲ್ಲಿರುವ ನನ್ನ ಕಚೇರಿಯಲ್ಲಿ ದತ್ತಾತ್ರೇಯ ಮೆಹರ್ ವಾಡೆ, ಪಿರ್ಯಾದಿ, ಪಿರ್ಯಾದಿಯ ಗಂಡ, ಮಲ್ಲಪ್ಪ ಉಸ್ಸುಕರ್ ರವರ ಸಮಕ್ಷಮ ಮಾತುಕತೆ ಆಯಿತು. ಸದರಿ ಮಾತುಕತೆಯಲ್ಲಿ ನಾನು ಪಿರ್ಯಾದಿಗೆ 2 ಖಾಲಿ ಚೆಕ್ ಗಳನ್ನು ಭದ್ರತೆಗಾಗಿ ನೀಡಿದ್ದೆನು. ನಂತರ 2 ತಿಂಗಳ ತರುವಾಯ ಪಿರ್ಯಾದಿ 1 ಚೆಕ್ ನ್ನು ಹರಿಹರದ ಆಕ್ಸಿಸ್ ಬ್ಯಾಂಕಿಗೆ 6 ಲಕ್ಷ ರೂಗಳನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದ್ದರು. ಆ ಸಂದರ್ಭದಲ್ಲಿ ನನಗೆ ಬ್ಯಾಂಕಿನಿಂದ ಶ್ರೀಕಾಂತ್ ಎನ್ನುವವರಿಗೆ ಚೆಕ್ ಬಂದಿದೆ ಅದನ್ನು ಕ್ಲಿಯರ್ ಮಾಡಬೇಕು ಎಂದು ಕರೆ ಬಂದಿತ್ತು. ಸದರಿ ವಿಚಾರವಾಗಿ ಪಿರ್ಯಾದಿಯವರನ್ನು ನೀವು ಬೇರೆಯವರ ಹೆಸರಿನಿಂದ ಏಕೆ ಹಾಕಿದ್ದೀರಿ ಎಂದು ವಿಚಾರಿಸಿದೆ. ಆಗ ಪಿರ್ಯಾದಿ ಶ್ರೀಕಾಂತ್ ರವರು ನಮಗೆ ಪರಿಚಯಸ್ಥರು ಎಂದು ಹೇಳಿದರು. ನಂತರ ನಾನು ಬ್ಯಾಂಕಿಗೆ ಬೇಟಿ ನೀಡಿ ಸದರಿ 6 ಲಕ್ಷ ರೂಗಳ ಚೆಕ್ ನ್ನು ಶ್ರೀಕಾಂತ್ ರವರ ಖಾತೆಗೆ ನಗದೀಕರಣಗೊಳಿಸಿದೆನು. ಸದರಿ ಚೆಕ್ ನಗದೀಕರಣವಾದ ನಂತರ ನಾನು ಪಿರ್ಯಾದಿಯವರಿಗೆ ನಿವೇಶನ ಮಾರಾಟದ ಬಗ್ಗೆ ಆದ ದಾಖಲಾತಿಗಳನ್ನು ತಿದ್ದುಪಡಿ ಮಾಡಲು ಬೆಳಗಾಂಗೆ ಬರಲು ಹೇಳಿದೆನು. ಆದರೆ ಪಿರ್ಯಾದಿ ಬರಲಿಲ್ಲ. 15 ದಿನಗಳ ತರುವಾಯ ನಾನು ಮತ್ತೆ ಪಿರ್ಯಾದಿಗೆ ಕರೆ

ಮಾಡಿ ವಿಚಾರಿಸಿದೆನು. ಆಗ ಪಿರ್ಯಾದಿ ನಾನು ನೀಡಿದ ಇನ್ನೊಂದು ಚೆಕ್ ಕಳೆದುಹೋಗಿದೆ ಅದನ್ನು ಹುಡುಕಿಕೊಂಡು ಬರುತ್ತೇನೆ ಎಂದು ಹೇಳಿದರು. ತದನಂತರ ಪಿರ್ಯಾದಿ ನನ್ನ ಬಳಿ ಬರದೇ ಇನ್ನೊಂದು ಚೆಕ್ ನ್ನು ಹರಿಹರದ ಆಕ್ಸಿಸ್ ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿರುತ್ತಾರೆ. ಆಗ ನಾನು ನನ್ನ ಖಾತೆಯ Stop payment ಮೋಡ್ ಗೆ ಹಾಕಿಸಿದೆನು. ನಾನು ಶ್ರೀಕಾಂತ ರವರಿಗೆ 6 ಲಕ್ಷ ರೂಗಳನ್ನು ಈಗಾಗಲೇ ನೀಡಿದ್ದರಿಂದ ನಾನು ಪಿರ್ಯಾದಿಗೆ ಯಾವುದೇ ಹಣ ನೀಡುವುದು ಬಾಕಿ ಇಲ್ಲ. ನನ್ನ ಮತ್ತು ಪಿರ್ಯಾದಿ ನಡುವೆ ಆದ ಖಾಲಿ ನಿವೇಶನ ಮಾರಾಟದ ಮೂಲ ದಾಖಲಾತಿಗಳು ಪಿರ್ಯಾದಿ ಬಳಿ ಇವೆ.

ಆರೋಪಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು

ಮತ್ತು ಜೆಎಂಎಫ್‌ಸಿ, ಹರಿಹರ.